# ಕರ್ನಾಟಕ ರಾಜ್ಯ ವಕ್ಫ್ ಮಹಿಳಾ ಪ್ರತಿಷ್ಠಾನದ ನಡವಳಿಗಳು

ವಿಷಯ: ನಿರ್ಗತಿಕ ಮುಸ್ಲಿಂ ಮಹಿಳೆಯರ ವಸತಿ ಗೃಹ ಯೋಜನೆ
ಅನುಷ್ಠಾನ ಕುರಿತು.

**ಪ್ರಸ್ತಾವನೆ:**

ಕರ್ನಾಟಕ ರಾಜ್ಯ ವಕ್ಫ್ ಮಹಿಳಾ ಪ್ರತಿಷ್ಠಾನದ ಸಭೆ ದಿನಾಂಕ: 06-07-2009ರಂದು ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ ಜರುಗಿದ್ದು, ಸದರಿ ಸಭೆಯಲ್ಲಿ ರಾಜ್ಯದ ನಿರ್ಗತಿಕ ಮುಸ್ಲಿಂ ಮಹಿಳೆಯರ ಅನುಕೂಲಕ್ಕಾಗಿ ವಸತಿ ಗೃಹ ಯೋಜನೆಯನ್ನು ಪ್ರಾರಂಭಿಸಲು ನಿರ್ಣಯ ಕೈಗೊಳ್ಳಲಾಯಿತು. ಈ ಹಿನ್ನಲೆಯಲ್ಲಿ ಈ ಕೆಳಕಂಡ ಆದೇಶ.

**ಆದೇಶ ಸಂಖ್ಯೆ:ಅಕಇ 80 ಡಬ್ಲ್ಯೂಎಫ್ ಡಬ್ಲ್ಯೂ 2009, ಬೆಂಗಳೂರು, ದಿನಾಂಕ: 28-10-2009**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಸರ್ಕಾರವು ಈಗಾಗಲೇ ಹೊರಡಿಸಲಾದ ಸರ್ಕಾರಿ ಆದೇಶ ಸಂಖ್ಯೆ: ಅಕಇ 80 ಡಬ್ಲ್ಯೂಎಫ್‌ಡಬ್ಲ್ಯೂ 2009, ದಿನಾಂಕ: 26.09.2009ನ್ನು ಹಿಂಪಡೆದು ಈ ಕೆಳಕಂಡಂತೆ ರಾಜ್ಯದ ನಿರ್ಗತಿಕ ಮುಸ್ಲಿಂ ಮಹಿಳೆಯರ ಅನುಕೂಲಕ್ಕಾಗಿ ಈ ಕೆಳಕಂಡ ಷರತ್ತುಗಳನ್ವಯ ವಸತಿ ಗೃಹ ಯೋಜನೆಯ ಅನುಷ್ಠಾನಕ್ಕೆ ಮಂಜೂರಾತಿ ನೀಡಿ ಆದೇಶ ಹೊರಡಿಸಲಾಗಿದೆ.

1. ರಾಜ್ಯದಲ್ಲಿರುವ ಪ್ರತಿಷ್ಠಿತ ನೋಂದಾಯಿತ ಸರ್ಕಾರೇತನ ಸಂಘ ಸಂಸ್ಥೆಗಳು/ಟ್ರಸ್ಟ್ ಮತ್ತು ಅನುಭವ ಇರುವ ಇತರೆ ಸಂಸ್ಥೆಗಳು ಈ ಯೋಜನೆಯ ಸೌಲಭ್ಯ ಪಡೆಯಲು ಅರ್ಹರಿರುತ್ತಾರೆ.

2. ನಿರ್ಗತಿಕ ಮುಸ್ಲಿಂ ಮಹಿಳೆಯರ ವಸತಿ ಗೃಹದಲ್ಲಿ ಪ್ರವೇಶ ಪಡೆಯಲು ಕನಿಷ್ಠ ವಯಸ್ಸು 18 ವರ್ಷ ಇರಬೇಕು.

3. ನಿರ್ಗತಿಕ ಮಹಿಳೆಯರು ಈ ವಸತಿ ಗೃಹದಲ್ಲಿ ಗರಿಷ್ಠ 6 ತಿಂಗಳಿಗೆ ಮಾತ್ರ ಇರಲು ಅವಕಾಶ ಇರುವುದು.

4. ಈ ಮಹಿಳೆಯರಿಗೆ ವಿವಿಧ ವೃತ್ತಿಗಳಲ್ಲಿ ತರಬೇತಿ ನೀಡಿ ಸ್ವಯಂ ಉದ್ಯೋಗದಲ್ಲಿ ತೊಡಗಿಸಿಕೊಳ್ಳಲು ಅವಕಾಶ ಕಲ್ಪಿಸುವುದು.

5. ವಸತಿ ಗೃಹ 50 ಮಹಿಳೆಯರು ವಾಸಿಸಲು, ವಿಶ್ರಾಂತಿ ಕೊಠಡಿ, ತರಗತಿ ಕೊಠಡಿ, ಅಡಿಗೆ ಮನೆ ಇತ್ಯಾದಿಯ ಸ್ಥಳ ಹೊಂದಿರುವ ಕಟ್ಟಡವಾಗಿರಬೇಕು.

6. ವಸತಿ ಗೃಹ ನಿರ್ವಹಿಸಲು ವಾರ್ಡನ್, ಅಡಿಗೆ ಸಿಬ್ಬಂದಿ (1ಕುಕ್, 1 ಸಹಾಯಕ ಕುಕ್, 1 ಸಹಾಯಕ) ಕನಿಷ್ಠ ಸಿಬ್ಬಂದಿ ಇರಬೇಕು.

7. ವಸತಿ ಗೃಹದ ವಾರ್ಡನ್‌ಗೆ ರೂ.5000/- ಅಡಿಗೆ ಭಟ್ಟನಿಗೆ ರೂ.3000/- ಸಹಾಯಕ ಅಡಿಗೆ ಭಟ್ಟನಿಗೆ ರೂ. 2000/- ಹಾಗೂ ಕಾವಲುಗಾರನಿಗೆ ರೂ.2000/- ಮಾಸಿಕ ಸಹಾಯಧನ ಕರ್ನಾಟಕ ರಾಜ್ಯ ವಕ್ಫ್ ಮಹಿಳಾ ಪ್ರತಿಷ್ಠಾನ ಸಂಸ್ಥೆಯ ಮುಖಾಂತರ ಭರಿಸುವುದು.

8. ಊಟದ ಖರ್ಚು ಹಾಗೂ ವಸತಿ ಗೃಹದ ಕಟ್ಟಡದ ಬಾಡಿಗೆಯನ್ನು ಕರ್ನಾಟಕ ರಾಜ್ಯ ವಕ್ಫ್ ಮಹಿಳಾ ಪ್ರತಿಷ್ಠಾನ ಪೂರ್ಣ ಖರ್ಚನ್ನು ಭರಿಸುವುದು.

9. ಪ್ರಸಕ್ತ ಸಾಲಿನಲ್ಲಿ ಇಂತಹ ವಸತಿ ಗೃಹಗಳನ್ನು ಬೆಂಗಳೂರಿನಲ್ಲಿ-4, ದಾವಣಗೆರೆ-1, ಶಿವಮೊಗ್ಗ-1, ಮಂಗಳೂರು-1, ಗುಲ್ಬರ್ಗಾ-1, ಮೈಸೂರಿನಲ್ಲಿ-1ರಂತೆ ಪ್ರತಿಷ್ಠಿತ NGO ಗಳಿಂದ ಅರ್ಜಿಗಳನ್ನು ಆಹ್ವಾನಿಸುವುದು.

ಕರ್ನಾಟಕ ರಾಜ್ಯ ವಕ್ಫ್ ಮಹಿಳಾ
ಪ್ರತಿಷ್ಠಾನದಿಂದ ಅನುಮೋದಿತ

ಸದಸ್ಯ ಕಾರ್ಯದರ್ಶಿರವರ ಪರವಾಗಿ
ಕರ್ನಾಟಕ ರಾಜ್ಯ ವಕ್ಫ್ ಮಹಿಳಾ ಪ್ರತಿಷ್ಠಾನ

ಗೆ:

1. ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಅಧ್ಯಕ್ಷರು ಕರ್ನಾಟಕ ರಾಜ್ಯ ವಕ್ಫ್ ಪರಿಷತ್ತು, ಬೆಂಗಳೂರು.
2. ಮಹಾಲೇಖಪಾಲರು, (ಆ ಮತ್ತು ಇ) ಕರ್ನಾಟಕ ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಕರ್ನಾಟಕ ರಾಜ್ಯ ವಕ್ಫ್ ಮಂಡಳಿ, ಬೆಂಗಳೂರು.
5. ಸರ್ಕಾರದ ಉಪಕಾರ್ಯದರ್ಶಿ ಮತ್ತು ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ವಕ್ಫ್ ಪರಿಷತ್ತು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ.
6. ಅಧ್ಯಕ್ಷರು/ಆಡಳಿತಾಧಿಕಾರಿ, ಎಲ್ಲಾ ಜಿಲ್ಲೆಗಳ ಜಿಲ್ಲಾ ವಕ್ಫ ಸಲಹಾ ಸಮಿತಿಗಳು (ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ಮುಖಾಂತರವಾಗಿ)
7. ಅಧೀನ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು.
8. ಶಾಖಾ ರಕ್ಷ ಕಡತ/ಹೆಚ್ಚುವರಿ ಪ್ರತಿಗಳು.

# ಕರ್ನಾಟಕ ರಾಜ್ಯ ವಕ್ಫ್ ಮಹಿಳಾ ಪ್ರತಿಷ್ಠಾನದ ನಡವಳಿಗಳು

ವಿಷಯ: ಸರ್ಕಾರೇತರ ಸಂಸ್ಥೆಗಳಿಂದ ಮುಸ್ಲಿಂ ಮಕ್ಕಳ ಪೂರ್ವ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸುವ ಕುರಿತು.

**ಪ್ರಸ್ತಾವನೆ:**

ಉರ್ದು ಪ್ರಾಥಮಿಕ ಶಾಲೆಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಮಕ್ಕಳು ಪ್ರವೇಶ ಪಡೆಯಬೇಕಾದರೆ, ಪೂರ್ವ ಪ್ರಾಥಮಿಕ ಶಾಲೆಗಳ ಅವಶ್ಯಕತೆ ಇರುವುದು ಒಂದು ವಾಸ್ತವ ಪರಿಸ್ಥಿತಿ. ಉರ್ದು ಮಾತೃ ಭಾಷೆಯ ಜನರು ವಾಸ ಮಾಡುವ ಕಡೆ ಉರ್ದು ಪೂರ್ವ ಪ್ರಾಥಮಿಕ ಶಾಲೆಗಳು ಇರಬೇಕು ಮತ್ತು ಅದನ್ನು ಸಂಬಂಧಪಟ್ಟ ಶಿಕ್ಷಕರು ಕೂಡ ಉರ್ದು ಭಾಷೆಯಲ್ಲಿ ಮಾತಾನಾಡಬೇಕಾಗಿದೆ. ಈ ದೃಷ್ಟಿಯಿಂದ ಸರ್ಕಾರೇತರ ಸಂಸ್ಥೆಗಳು ಈ ವರ್ಷದಿಂದ ಇಂತಹ ಪೂರ್ವ ಪ್ರಾಥಮಿಕ ಶಾಲೆಗಳನ್ನು ಉರ್ದು ಭಾಷೆಯ ಮೂಲಕ ನಡೆಸುವಲ್ಲಿ ಅಂತಹ ಸಂಸ್ಥೆಗಳಿಗೆ ಆರ್ಥಿಕ ಸಹಾನುಧಾನ ನೀಡಲು ಕರ್ನಾಟಕ ರಾಜ್ಯ ವಕ್ಫ್ ಮಹಿಳಾ ಪ್ರತಿಷ್ಠಾನ ನಿರ್ಧರಿಸಿದೆ. ಇದಕ್ಕೆ ಸಂಬಂಧಿಸಿದಂತೆ ದಿನಾಂಕ: 06-07-2009ರಂದು ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ಈ ಯೋಜನೆಯಲ್ಲಿ ಅನುಷ್ಠಾನಕ್ಕೆ ತರಲು ನಿರ್ಧರಿಸಲಾಗಿದೆ. ಈ ಹಿನ್ನಲೆಯಲ್ಲಿ ಈ ಕೆಳಕಂಡ ಆದೇಶ.

**ಆದೇಶ ಸಂಖ್ಯೆ:ಅಕಇ 78 ಡಬ್ಲ್ಯೂಎಫ್ ಡಬ್ಲ್ಯೂ 2009, ಬೆಂಗಳೂರು, ದಿನಾಂಕ: 28-10-2009**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಸರ್ಕಾರವು ಈಗಾಗಲೇ ಹೊರಡಿಸಲಾದ ಸರ್ಕಾರಿ ಆದೇಶ ಸಂಖ್ಯೆ: ಅಕಇ 78 ಡಬ್ಲ್ಯೂಎಫ್‌ಡಬ್ಲ್ಯೂ 2009, ದಿನಾಂಕ: 26.09.2009ನ್ನು ಹಿಂಪಡೆದು ರಾಜ್ಯದ ಮುಸ್ಲಿಂ ಮಕ್ಕಳಿಗಾಗಿ ಸರ್ಕಾರೇತರ ಸಂಸ್ಥೆಗಳ ವತಿಯಿಂದ ಪೂರ್ವ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸುವ ಯೋಜನೆಗೆ ಹಾಗೂ ಸದರಿ ಸಂಸ್ಥೆಗಳಿಗೆ ಈ ಕೆಳಕಂಡ ಷರತ್ತುಗಳನ್ವಯ ಮಂಜೂರಾತಿ ನೀಡಿ ಆದೇಶ ಹೊರಡಿಸಲಾಗಿದೆ.

1. ರಾಜ್ಯದಲ್ಲಿ ಉರ್ದುಭಾಷೆಯಲ್ಲಿ ಮಾತಾಡುವವರ ಸಂಖ್ಯೆ ಹೆಚ್ಚಾಗಿದ್ದು ಎಲ್ಲಿ ಪೂರ್ವ ಪ್ರಾಥಮಿಕ ಶಾಲೆಗಳ ಅವಶ್ಯಕತೆ ಇದೆಯೊ ಅಲ್ಲಿ ಇಂತಹ ಶಾಲೆಗಳನ್ನು ಸರ್ಕಾರೇತರ ಸಂಸ್ಥೆಗಳು ಸ್ಥಾಪಿಸಿದ್ದಲ್ಲಿ ನೆರವು ನೀಡಲಾಗುವುದು.
2. ಸರ್ಕಾರಿ ಉರ್ದು ಪ್ರಾಥಮಿಕ ಶಾಲೆಗಳ ಸಮೀಪದಲ್ಲಿ ಸರ್ಕಾರೇತರ ಸಂಸ್ಥೆಗಳು ಪೂರ್ವ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಿದ್ದಲ್ಲಿ ಇಂತಹ ಶಾಲೆಗಳಿಗೆ ನೆರವು ನೀಡಲಾಗುವುದು.
3. ಉರ್ದು ಪ್ರಾಥಮಿಕ ಶಾಲೆಗಳ ಹೊರತಾಗಿ ಬೇರೆಕಡೆ ಪೂರ್ವ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಬೇಕಾದರೆ ಅಲ್ಲಿಯ ಸ್ವಯಂಸೇವ ಸಂಸ್ಥೆಗಳ ಮೂಲಕ ಈ ಶಾಲೆಗಳನ್ನು ನಡೆಸುವುದು.
4. ಈ ಶಾಲೆಗಳಲ್ಲಿ ಕಾರ್ಯನಿರ್ವಹಿಸುವ ಉಪಾಧ್ಯಾಯನಿ, ಎನ್‌ಟಿಟಿ ಅಥವಾ ನರ್ಸರಿ ಕೋರ್ಸುಗಳಲ್ಲಿ ಉತ್ತೀರ್ಣರಾಗಿರಬೇಕು. ಹಾಗೂ ಇವರಿಗೆ ರೂ.3000/- ಮತ್ತು. ಸಹಾಯಕಿಗೆ ರೂ.2000/- ಸಂಸ್ಥೆಯ ಮುಖಾಂತರ ಸಹಾಯಧನ ನೀಡಲಾಗುವುದು.
5. ಅಂತಹ ಸಂಸ್ಥೆಗಳು ಅಭ್ಯರ್ಥಿಗಳಿಂದ ಯಾವುದೇ ಶುಲ್ಕ ಪಡೆಯಕೂಡದು.
6. ನಿಷ್ಠೆ, ದಕ್ಷತೆ ಮತ್ತು ಪ್ರಮಾಣೀಕತೆಯಿಂದ ದುಡಿಯುತ್ತಿರುವ ಸ್ವಯಂಸೇವಾ ಸಂಸ್ಥೆಗಳನ್ನು ಗುರುತಿಸಿ ಈ ಜವಾಬ್ದಾರಿಯನ್ನು ವಹಿಸಿಕೊಡಲಾಗುವುದು.
7. ಪ್ರವೇಶಕ್ಕೆ ಸೇರಿಸುವಾಗ ಹೆಣ್ಣು ಮತ್ತು ಗಂಡು ಮಕ್ಕಳ ವಯಸ್ಸು 3ರಿಂದ 5ವರ್ಷದ ಒಳಗೆ ಇರಬೇಕು.

ಕರ್ನಾಟಕ ರಾಜ್ಯ ವಕ್ಫ್ ಮಹಿಳಾ
ಪ್ರತಿಷ್ಠಾನದಿಂದ ಅನುಮೋದಿತ

ಸದಸ್ಯ ಕಾರ್ಯದರ್ಶಿ ರವರ ಪರವಾಗಿ
ಕರ್ನಾಟಕ ರಾಜ್ಯ ವಕ್ಫ್ ಮಹಿಳಾ ಪ್ರತಿಷ್ಠಾನ

ಗೆ:

1. ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಅಧ್ಯಕ್ಷರು ಕರ್ನಾಟಕ ರಾಜ್ಯ ವಕ್ಫ್ ಪರಿಷತ್ತು, ಬೆಂಗಳೂರು.

**ಪು.ತಿ.ನೋ....**

2. ಮಹಾಲೇಖಪಾಲರು, (ಆ ಮತ್ತು ಇ) ಕರ್ನಾಟಕ ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಕರ್ನಾಟಕ ರಾಜ್ಯ ವಕ್ಫ್ ಮಂಡಳಿ, ಬೆಂಗಳೂರು.
5. ಸರ್ಕಾರದ ಉಪಕಾರ್ಯದರ್ಶಿ ಮತ್ತು ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ವಕ್ಫ್ ಪರಿಷತ್ತು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ.
6. ಅಧ್ಯಕ್ಷರು/ಆಡಳಿತಾಧಿಕಾರಿ, ಎಲ್ಲಾ ಜಿಲ್ಲೆಗಳ ಜಿಲ್ಲಾ ವಕ್ಫ ಸಲಹಾ ಸಮಿತಿಗಳು (ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ಮುಖಾಂತರವಾಗಿ)
7. ಅಧೀನ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು.
8. ಶಾಖಾ ರಕ್ಷ ಕಡತ/ಹೆಚ್ಚುವರಿ ಪ್ರತಿಗಳು.